# ಡಿ.8ಕ್ಕೆ ಭಾರತ್ ಬಂದ್

## ಪ್ರತಿಭಟನಾಕಾರ ರೈತರಿಂದ ಬಂದ್‌ಗೆ ಕರೆ । ಟೋಲ್ ಸಂಗ್ರಹಕ್ಕೆ ತಡೆ

**ನವದೆಹಲಿ:** ಕೇಂದ್ರ ಸರ್ಕಾರದ ಜೊತೆಗಿನ ಮತ್ತೊಂದು ಸುತ್ತಿನ ಮಾತುಕತೆಯೂ ವಿಫಲವಾದ ಬೆನ್ನಲ್ಲೇ ಅನ್ನದಾತರ ಆಕ್ರೋಶ ಹೆಚ್ಚಾಗಿದೆ. ಕೇಂದ್ರ ಕೃಷಿ ಕಾಯ್ದೆಗಳನ್ನು ವಾಪಸ್ ಪಡೆಯುವಂತೆ ಆಗ್ರಹಿಸಿ ನಡೆಸುತ್ತಿರುವ ಪ್ರತಿಭಟನೆಯನ್ನು ತೀವ್ರಗೊಳಿಸಲು ರೈತರು ನಿರ್ಧರಿಸಿದ್ದು, ಡಿ.8ರಂದು ದೇಶವ್ಯಾಪಿ ಬಂದ್‌ಗೆ ಕರೆ ನೀಡಿದ್ದಾರೆ.

ಈಗಾಗಲೇ ದೆಹಲಿಗೆ ತೆರಳುವ ಕೆಲವು ರಸ್ತೆಗಳನ್ನು ಮುಚ್ಚಿ ಗಡಿಯಲ್ಲೇ ಪ್ರತಿಭಟನೆ ಕುಳಿತಿರುವ ರೈತರು, ಈಗ ರಾಷ್ಟ್ರ ರಾಜಧಾನಿಗೆ ಪ್ರವೇಶ ಪಡೆಯುವ ಎಲ್ಲ ಮಾರ್ಗಗಳನ್ನೂ ಬ್ಲಾಕ್ ಮಾಡುವುದಾಗಿ ಶುಕ್ರವಾರ ಘೋಷಿಸಿದ್ದಾರೆ. ಡಿ.8ರ ಮಂಗಳವಾರ ದೇಶವ್ಯಾಪಿ ಬಂದ್ ನಡೆಸಲಿದ್ದೇವೆ. ಅಂದು ದೇಶಾದ್ಯಂತದ ಹೆದ್ದಾರಿಯ ಟೋಲ್‌ಗೇಟ್‌ಗಳಿಗೆ ಮುತ್ತಿಗೆ ಹಾಕಿ, ಸರ್ಕಾರ ಟೋಲ್ ಸಂಗ್ರಹ ಮಾಡದಂತೆ ತಡೆಯಲಿದ್ದೇವೆ. ನಮ್ಮ ಈ ಚಳವಳಿಗೆ ಇನ್ನಷ್ಟು ಸಂಘಟನೆಗಳ ಬೆಂಬಲ ಕೋರುತ್ತೇವೆ ಎಂದು ರೈತ ಸಂಘಟನೆಯೊಂದರ ಮುಖ್ಯಸ್ಥ ಹರೀಂದರ್ ಸಿಂಗ್ ಲಖೋವಾಲ್ ಹೇಳಿದ್ದಾರೆ.

ನಮಗೆ ಮಾರಕವಾಗಿರುವ ಕೃಷಿ ಕಾಯ್ದೆಗಳನ್ನು ವಾಪಸ್ ಪಡೆಯುವವರೆಗೂ ನಾವು ವಿಶ್ರಮಿಸುವುದಿಲ್ಲ ಎಂದೂ ಅವರು ಹೇಳಿದ್ದಾರೆ. ಇದೇ ವೇಳೆ, ಶನಿವಾರ ಕೇಂದ್ರ ಸರ್ಕಾರ ಮತ್ತು ರೈತ ಸಂಘಟನೆಗಳ ನಡುವೆ ಮತ್ತೊಂದು ಸುತ್ತಿನ ಮಾತುಕತೆ ನಡೆಯಲಿದೆ.

**ಪ್ರಶಸ್ತಿ ಸ್ವೀಕಾರಕ್ಕೆ ನಕಾರ:** ಪಂಜಾಬ್ ಸರ್ಕಾರ ಘೋಷಿಸಿರುವ 'ಶಿರೋಮಣಿ ಪಂಜಾಬಿ ಪ್ರಶಸ್ತಿ'ಯನ್ನು ಸ್ವೀಕರಿಸುವುದಿಲ್ಲ ಎಂದು ಪಂಜಾಬಿ ಗಾಯಕ- ನಟ ಹರ್ಭಜನ್ ಮನ್ ಘೋಷಿಸಿದ್ದಾರೆ. ರೈತರ ಪ್ರತಿಭಟನೆಗೆ ಬೆಂಬಲ ಸೂಚಿಸಿ ಈ ನಿರ್ಧಾರ ಕೈಗೊಂಡಿದ್ದಾಗಿ ಹೇಳಿದ್ದಾರೆ. ಈ ನಡುವೆ, 'ದೆಹಲಿಯಲ್ಲಿ ಕೊರೊನಾ ಪ್ರಕರಣಗಳು ಹೆಚ್ಚುತ್ತಿದೆ. ದಯವಿಟ್ಟು ಕೇಂದ್ರ ಸರ್ಕಾರವು ರೈತರ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕು' ಎಂದು ಬಾಲಿವುಡ್ ಹಿರಿಯ ನಟ ಧರ್ಮೇಂದ್ರ ಶುಕ್ರವಾರ ಟ್ವೀಟ್ ಮಾಡಿದ್ದು, ಕೆಲವೇ ನಿಮಿಷಗಳಲ್ಲಿ ಟ್ವೀಟ್ ಅನ್ನು ಅಳಿಸಿಹಾಕಿದ್ದಾರೆ.

**ಬೇಷರತ್ ಕ್ಷಮೆಗೆ ಆಗ್ರಹ:** ಶಹೀನ್‌ಬಾಗ್ ದಾದಿ ಎಂದೇ ಹೆಸರಾಗಿರುವ ಅಜ್ಜಿ ಬಿಲ್ಕೀಸ್ ಬಾನೋ '100 ರೂ.ಗೆ ಲಭ್ಯವಿದ್ದಾರೆ' ಎಂದು ವಿವಾದಾತ್ಮಕ ಟ್ವೀಟ್ ಮಾಡಿರುವ ಬಾಲಿವುಡ್ ನಟಿ ಕಂಗನಾ ರಣಾವತ್ ಬೇಷರತ್ ಕ್ಷಮೆ ಯಾಚಿಸಬೇಕು ಎಂದು ದೆಹಲಿ ಸಿಖ್ ಗುರುದ್ವಾರ ನಿರ್ವಹಣಾ ಸಮಿತಿ ಆಗ್ರಹಿಸಿದೆ. ಕಂಗನಾ ವಿರುದ್ಧ ಈಗಾಗಲೇ ಕಾನೂನು ನೋಟಿಸ್ ಜಾರಿ ಮಾಡಲಾಗಿದೆ. ಅವರು ವಾರದೊಳಗೆ ಬೇಷರತ್ ಕ್ಷಮೆ ಯಾಚಿಸಬೇಕು ಎಂದು ಸಮಿತಿ ಹೇಳಿದೆ.



ದೆಹಲಿ ಗಡಿಯಲ್ಲಿ ಪ್ರತಿಭಟನಾಕಾರ ರೈತರು ರಸ್ತೆ ಮಧ್ಯೆಯೇ ಆಹಾರ ಸೇವಿಸುತ್ತಿರುವುದು.

### ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ

ದೆಹಲಿ ಗಡಿಯಲ್ಲಿ ಪ್ರತಿಭಟನೆ ನಡೆಸುತ್ತಿರುವ ರೈತರನ್ನು ಕೂಡಲೇ ಸ್ಥಳಾಂತರಿಸುವಂತೆ ಕೋರಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಕೆಯಾಗಿದೆ. ರಸ್ತೆಗಳು ಬ್ಲಾಕ್ ಆಗಿದ್ದು, ಆ ರಸ್ತೆಗಳ ಮೂಲಕ ಸಂಚರಿಸುವವರು ಭಾರೀ ಸಮಸ್ಯೆ ಎದುರಿಸುತ್ತಿದ್ದಾರೆ. ಅಲ್ಲದೆ, ಪ್ರತಿಭಟನಾಕಾರರಿಂದಾಗಿ ಕೊರೊನಾ ಪ್ರಕರಣಗಳ ಸಂಖ್ಯೆ ಹೆಚ್ಚುವ ಭೀತಿಯೂ ಇದೆ ಎಂದು ಅರ್ಜಿದಾರ ರಿಷಬ್ ಶರ್ಮಾ ಹೇಳಿದ್ದಾರೆ.

### ಕೆನಡಾಗೆ ಪ್ರತಿಭಟನೆ ಸಲ್ಲಿಕೆ

ರೈತರಿಗೆ ಬೆಂಬಲ ಸೂಚಿಸಿ ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೊ ನೀಡಿದ್ದ ಹೇಳಿಕೆ ಸಂಬಂಧ ಶುಕ್ರವಾರ ಕೆನಡಾ ಹೈಕಮಿಷನರ್ ಅನ್ನು ಕರೆಸಿಕೊಂಡು ಭಾರತ ತೀವ್ರ ಪ್ರತಿಭಟನೆ ವ್ಯಕ್ತಪಡಿಸಿದೆ. ಟ್ರುಡೊ ಅವರ ಹೇಳಿಕೆ ದೇಶದ ಆಂತರಿಕ ವಿಚಾರದಲ್ಲಿನ ಹಸ್ತಕ್ಷೇಪವಾಗಿದ್ದು, ಇಂಥ ವರ್ತನೆ ಮುಂದುವರಿದರೆ, ಎರಡೂ ದೇಶಗಳ ಬಾಂಧವ್ಯಕ್ಕೆ ಗಂಭೀರ ಹಾನಿ ಉಂಟಾಗಲಿದೆ ಎಂದೂ ಭಾರತ ಎಚ್ಚರಿಕೆ ನೀಡಿದೆ.

> ಸಂಬಂಧಪಟ್ಟ ಎಲ್ಲರನ್ನೂ ಸಮಾಲೋಚಿಸಿ, ರೈತರ ಅನುಕೂಲಕ್ಕೆಂದೇ ಕೃಷಿ ಕಾಯ್ದೆಗಳನ್ನು ಜಾರಿ ಮಾಡಲಾಗಿದೆ. ಆದಷ್ಟು ಬೇಗ ಕೇಂದ್ರ ಸೂಕ್ತ ನಿರ್ಧಾರ ತಾಳಲಿದೆ.
>
> – ನಿರ್ಮಲಾ ಸೀತಾರಾಮನ್, ಕೇಂದ್ರ ವಿತ್ತ ಸಚಿವೆ

### ಭಾರತ್ ಬಂದ್ ಬಗ್ಗೆ ರೈತರು ಹೇಳಿದ್ದೇನು?

- ಡಿ.8ರ ಮಂಗಳವಾರ ರಾಷ್ಟ್ರವ್ಯಾಪಿ ಬಂದ್‌ಗೆ ಕರೆ ನೀಡುತ್ತಿದ್ದೇವೆ
- ದೆಹಲಿಗೆ ತೆರಳುವ ಎಲ್ಲ ಮಾರ್ಗಗಳನ್ನೂ ಬ್ಲಾಕ್ ಮಾಡುತ್ತೇವೆ
- ಅಂದು ದೇಶದ ಎಲ್ಲ ಹೆದ್ದಾರಿ ಟೋಲ್ ಗೇಟ್‌ಗಳಿಗೆ ಮುತ್ತಿಗೆ ಹಾಕುತ್ತೇವೆ
- ಸರ್ಕಾರ ಟೋಲ್ ಸಂಗ್ರಹ ಮಾಡದಂತೆ ತಡೆಯುತ್ತೇವೆ
- ಶನಿವಾರ ಕೇಂದ್ರ ಸರ್ಕಾರ ಮತ್ತು ಕಾರ್ಪೊರೇಟ್ ಕಂಪನಿಗಳ ಪ್ರತಿಕೃತಿ ದಹಿಸುತ್ತೇವೆ
- ಡಿ.7ರಂದು ರೈತರು ತಮ್ಮ ಪ್ರಶಸ್ತಿಗಳು, ಮೆಡಲ್‌ಗಳನ್ನು ಹಿಂದಿರುಗಿಸುತ್ತೇವೆ